# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಜಿ.ಧನರಾಜ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಕ್ಕಮಗಳೂರು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಕುರಿತು.

ಓದಲಾಗಿದೆ:- 1) ಮು.ಕಾ.ನಿ.ಅ., ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ:ಜಿಪಂಚಿ/ಆ-1/ಸಿಸಿಎ/ಸಿಆರ್-01/2014-15 ದಿ: 24.04.2015.
2) ಸರ್ಕಾರದ ಕಾರಣ ಕೇಳುವ ನೋಟೀಸ್ ದಿನಾಂಕ 18.06.2015.
3) ಶ್ರೀ ಜಿ.ಧನರಾಜ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಚಿಕ್ಕಮಗಳೂರು ಇವರು ಸಲ್ಲಿಸಿರುವ ಲಿಖಿತ ಹೇಳಿಕೆ ದಿನಾಂಕ 10.07.2015.
4) ಮು.ಕಾ.ನಿ.ಅ., ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು ಇವರ ಪತ್ರ ಸಂಖ್ಯೆ:ಜಿಪಂಚಿ/ಆ-1/ಸಿಸಿಎ/ಸಿಆರ್-1/2015-16/ದಿ:23.09.2016.

---

## ಪ್ರಸ್ತಾವನೆ:-

ಮೇಲೆ ಓದಲಾದ ಕ್ರಮ ಸಂಖ್ಯೆ:-(1)ರ ಪತ್ರದಲ್ಲಿ ಶ್ರೀ ಜಿ.ಧನರಾಜ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಕ್ಕಮಗಳೂರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಸದರಿಯವರು ಎಸಗಿದ್ದ ಒಟ್ಟು-13 ಕರ್ತವ್ಯಲೋಪಗಳಿಗೆ ಸಂಬಂಧಿಸಿದಂತೆ, ದಿನಾಂಕ 18.06.2015ರಂದು ಕರ್ನಾಟಕ ನಾಗರೀಕ ಸೇವಾ (ವನಿಮೇ) ನಿಯಮಾವಳಿಗಳು 1957ರ ನಿಯಮ 12(1)(ಎ)ರನ್ವಯ ಕಾರಣ ಕೇಳುವ ನೋಟಿಸನ್ನು ಜಾರಿ ಮಾಡಲಾಗಿದ್ದು, ಇದಕ್ಕೆ ಅಧಿಕಾರಿಯು ದಿನಾಂಕ 10.07.2015ರಂದು ನೀಡಿರುವ ಲಿಖಿತ ರಕ್ಷಣಾ ಹೇಳಿಕೆಯಲ್ಲಿ ತಮ್ಮ ವಿರುದ್ದದ ಆರೋಪಗಳನ್ನು ಅಲ್ಲಗಳೆಯುತ್ತಾ, ತಮ್ಮ ವಿರುದ್ದ ಶಿಸ್ತುಕ್ರಮವನ್ನು ಕೈಬಿಡುವಂತೆ ಕೋರಿರುತ್ತಾರೆ.

ಸದರಿ ಅಧಿಕಾರಿಯ ವಿರುದ್ಧದ 13 ಆರೋಪಗಳ ಪೈಕಿ 10 ಆರೋಪಗಳು ಸಾಬೀತಾಗಿದ್ದು, ಸದರಿ ಆರೋಪಗಳಲ್ಲಿ ಹಣಕಾಸಿನ ಅವ್ಯವಹಾರ/ಆರ್ಥಿಕ ನಷ್ಟದ ಆರೋಪಗಳು ಇರುವುದಿಲ್ಲ. ಕೆಲವೊಂದು ಕಾಮಗಾರಿಗಳಲ್ಲಿ ಪ್ರಗತಿಯನ್ನು ಸಾಧಿಸಲು, ಮೇಲ್ವಿಚಾರಣೆ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲರಾಗಿರುವುದು, ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ನಡವಳಿಗಳನ್ನು ಪಂಚತಂತ್ರದಲ್ಲಿ ಅಳವಡಿಸದೆ ಕರ್ತವ್ಯ ಲೋಪ ಮತ್ತು ಈ ಕೆಳಕಂಡಂತೆ ನಿರ್ಲಕ್ಷತೆಯನ್ನು ತೋರಿರುತ್ತಾರೆ.

- ಸದರಿ ಅಧಿಕಾರಿಯು 2014-15ನೇ ಸಾಲಿನಲ್ಲಿ ನರೇಗಾ ಯೋಜನೆಯಡಿ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳನ್ನು ಅಂತರ್ಜಾಲದಲ್ಲಿ ಅಳವಡಿಸಲು ಸೂಚಿಸಿರುವುದನ್ನು ಪೂರ್ಣಗೊಳಿಸದೆ,
- ನರೇಗಾ ಯೋಜನೆಯ ಕಾಮಗಾರಿಗಳ ಅನುಷ್ಠಾನ ಹಾಗೂ ನೋಂದಾಯಿತ ಕೂಲಿಗಾರರ ಜಾಬ್ ಕಾರ್ಡ್‌ನೊಂದಿಗೆ ಅಳವಡಿಸದೆ,

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಪ್ರತ್ಯೇಕ ಕ್ರಿಯಾ ಯೋಜನೆ ಸಲ್ಲಿಸಲು ಸೂಚನೆ ನೀಡಿದ್ದರೂ ನವೆಂಬರ್ 2014ರವರೆಗೆ ಗ್ರಾಮ ಪಂಚಾಯಿತಿವಾರು ಕ್ರಿಯಾ ಯೋಜನೆಯನ್ನು ತಯಾರಿಸಿ, ಸಲ್ಲಿಸಲು ವಿಫಲರಾಗಿರುತ್ತಾರೆ
- ಹಾಗೂ 47 ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ನವೆಂಬರ್ 2014ರವರೆಗೆ 6,508 ಎನ್.ಎಂ.ಆರ್. ವಿತರಣೆ ಮಾಡಿದ್ದು, ಈ ಪೈಕಿ 2,865 ಎನ್.ಎಂ.ಆರ್.ಗಳನ್ನು ಭರ್ತಿ ಮಾಡಿದ್ದು, ಇನ್ನು 3,643 ಎನ್.ಎಂ.ಆರ್.ಗಳನ್ನು ಭರ್ತಿ ಮಾಡದೆ, ಶೇಕಡ 100ರಷ್ಟು ಪ್ರಗತಿಯನ್ನು ಸಾಧಿಸಲು ವಿಫಲರಾಗಿರುತ್ತಾರೆ.
- ನಿರ್ಮಲ ಭಾರತ ಅಭಿಯಾನ ಯೋಜನೆಯಡಿ ಕೌಟುಂಬಿಕ ಶೌಚಾಲಯ ನಿರ್ಮಾಣಕ್ಕಾಗಿ 47 ಗ್ರಾಮ ಪಂಚಾಯಿತಿಗಳಿಗೆ 6,778 ಗುರಿ ನಿಗಧಿಪಡಿಸಿದ್ದು, ನವೆಂಬರ್ 2014ರವರೆಗೆ 3,802 ಇ-ಎನ್.ಎಂ.ಆರ್.ಗಳನ್ನು ಮಾತ್ರ ಸೃಜನೆ ಮಾಡಿ ಇನ್ನು 2,976 ಎನ್.ಎಂ.ಆರ್.ಗಳನ್ನು ಸೃಜನೆ ಮಾಡಿರುವುದಿಲ್ಲ. ಅನುಮೋದಿತ 3,880 ಕಾಮಗಾರಿಗಳ ಪೈಕಿ, 442 ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. ಕೇವಲ 23 ಕಾಮಗಾರಿಗಳನ್ನು ಮಾತ್ರ ಪೂರ್ಣಗೊಳಿಸಿರುತ್ತಾರೆ. ಒಟ್ಟು 184.14 ಲಕ್ಷಗಳ ಅನುದಾನ ಲಭ್ಯವಿದ್ದರೂ ನವೆಂಬರ್ 2014ರವರೆಗೆ 75.09 ಲಕ್ಷ ಭರಿಸಿ, ಶೇಕಡ 16 ರಷ್ಟು ಕನಿಷ್ಠ ಪ್ರಗತಿ ಸಾಧಿಸಲಾಗಿದೆ. 28 ಗ್ರಾಮ ಪಂಚಾಯಿತಿಗಳಲ್ಲಿ ಕೇವಲ ಶೇಕಡ 50ರಷ್ಟು ಪ್ರಗತಿ ಕಡಿಮೆ ಮಾಡಿ ಪ್ರಗತಿ ಸಾಧಿಸಲಾಗಿದೆ.
- ಸಕಾಲ ಯೋಜನೆಯಡಿ ಸ್ವೀಕೃತವಾದ ಅರ್ಜಿಗಳನ್ನು ಗಣಕ ಯಂತ್ರದಲ್ಲಿ ನಮುದಿಸದೆ ನಿಗಧಿತ ಸಮಯದೊಳಗೆ ಸೇವೆ ಒದಗಿಸುವ ಬಗ್ಗೆ ಮೇಲ್ವಿಚಾರಣೆ ಮಾಡದೆ, ಪರಿಶೀಲನೆ ನಡೆಸದೆ ಇರುವುದರಿಂದ ಜಿಲ್ಲಾ ರ್‍ಯಾಂಕಿಂಗ್‌ನಲ್ಲಿ ಹಿನ್ನಡೆಯಾಗಿರುತ್ತದೆ.
- 2014-15ನೇ ಸಾಲಿಗೆ 47 ಗ್ರಾಮ ಪಂಚಾಯಿತಿಗೆ ಸಂಬಂಧಿಸಿದಂತೆ 160 ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಗಳು ಏಪ್ರಿಲ್‌ನಿಂದ ಅಕ್ಟೋಬರ್‌ವರೆಗೆ ನಡೆದಿದ್ದು, ಈ ಪೈಕಿ 126 ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಗಳ ನಡವಳಿಗಳನ್ನು ಪಂಚತಂತ್ರದಲ್ಲಿ ಅಳವಡಿಸಿದ್ದು, ಉಳಿದ 34 ಗ್ರಾಮ ಸಭೆಗಳ ನಡವಳಿಗಳನ್ನು ಪಂಚತಂತ್ರದಲ್ಲಿ ಅಳವಡಿಸಿರುವುದಿಲ್ಲ. ಗ್ರಾಮ ಪಂಚಾಯಿತಿಗಳ ಸೂಕ್ತ ಮೇಲ್ವಿಚಾರಣೆ ಹಾಗೂ ಪ್ರಗತಿ ಪರಿಶೀಲನೆ ಮಾಡದೆ ಜವಾಬ್ದಾರಿ ನಿರ್ವಹಿಸಲು ವಿಫಲರಾಗಿರುತ್ತಾರೆ.
- 2013-14ನೇ ಸಾಲಿನ ಗ್ರಾಮ ಪಂಚಾಯಿತಿಗಳ ಜಮಾಬಂದಿ ಸಂಬಂಧ ನವೆಂಬರ್ 2014ರ ಅಂತ್ಯದವರೆಗೆ 47 ಗ್ರಾಮ ಪಂಚಾಯಿತಿಗಳ ಪೈಕಿ 10 ಗ್ರಾಮ ಪಂಚಾಯಿತಿಗಳ ಜಮಾಬಂದಿ ನಡೆದಿರುವುದಾಗಿ 09 ಗ್ರಾಮ ಪಂಚಾಯಿತಿಗಳ ಜಮಾಬಂದಿ ನಡವಳಿಗಳನ್ನು ಪಂಚತಂತ್ರದಲ್ಲಿ ಅಳವಡಿಸಿದ್ದು, ಉಳಿದ ಗ್ರಾಮ ಪಂಚಾಯಿತಿಗಳ ಜಮಾಬಂದಿ ನಡೆದಿರುವ ಬಗ್ಗೆ ಮತ್ತು ಪಂಚತಂತ್ರದಲ್ಲಿ ನಡವಳಿ ಅಳವಡಿಸುವ ಬಗ್ಗೆ ಗ್ರಾಮ ಪಂಚಾಯಿತಿಗಳ ಮೇಲೆ ಸೂಕ್ತ ಮೇಲ್ವಿಚಾರಣೆ ನಡೆಸದೇ ಜವಾಬ್ದಾರಿ ನಿರ್ವಹಣೆಯಲ್ಲಿ ವಿಫಲರಾಗಿರುತ್ತಾರೆ.
- ಚಿಕ್ಕಮಗಳೂರು ತಾಲ್ಲೂಕಿನ 47 ಗ್ರಾಮ ಪಂಚಾಯಿತಿಗಳಿಗೆ ಪ್ರಸಕ್ತ ಸಾಲಿಗೆ ತೆರಿಗೆ ಬೇಡಿಕೆ ಒಟ್ಟು ರೂ.399.30 ಲಕ್ಷ ಇದ್ದು ಈ ಪೈಕಿ 98.06 ಲಕ್ಷ ಮಾತ್ರ ತೆರಿಗೆ ಸಂಗ್ರಹಿಸಿ ಶೇಕಡ 26ರಷ್ಟು ಗುರಿ ಸಾಧಿಸಿರುವುದಾಗಿ ಪಂಚತಂತ್ರ ವರದಿಯಲ್ಲಿ ಕಂಡು ಬರುತ್ತದೆ. ಆದರೆ ಹಾರ್ಡ್ ಕಾಪಿ ಸಲ್ಲಿಸಿರುವ ಪ್ರಗತಿ ವರದಿಯಲ್ಲಿ ಗುರಿ ಒಟ್ಟು 275.43 ಲಕ್ಷ ಒಟ್ಟು ವಸೂಲಿ 221.27 ಲಕ್ಷ ಎಂದು ಮಾಹಿತಿ ಸಲ್ಲಿಸಿದ್ದು, ಸದರಿ ತೆರಿಗೆ ಗುರಿ ಸಂಗ್ರಹಣೆ

ಮಾಹಿತಿಯು ಒಂದಕ್ಕೊಂದು ತಾಳೆಯಾಗದೆ ಇದ್ದು ಪಂಚತಂತ್ರದಲ್ಲಿ ಸರಿಯಾಗಿ ಮಾಹಿತಿ ಅಳವಡಿಸಲು ಗ್ರಾಮ ಪಂಚಾಯಿತಿಗಳ ಸೂಕ್ತ ಮೇಲ್ವಿಚಾರಣೆ ಮಾಡಿ ಪ್ರಗತಿ ಪರಿಶೀಲನೆ ನಡೆಸಿ, ಕ್ರಮವಹಿಸದೆ, ಜವಾಬ್ದಾರಿ ನಿರ್ವಹಣೆಯಲ್ಲಿ ವಿಫಲರಾಗಿರುತ್ತಾರೆ.

- ಎನ್.ಆರ್.ಎಲ್.ಎಂ. ಯೋಜನೆಯಡಿ 2014-15ನೇ ಸಾಲಿಗೆ ಸುತ್ತು ನಿಧಿ ಗುರಿ 25 ಇದ್ದು, ಸಾಧನೆ 25 ಮಾಡಿದ್ದರೂ 2013-14ನೇ ಸಾಲಿನ ಉಳಿಕೆ ಅನುದಾನ ರೂ.7.95 ಲಕ್ಷಗಳಲ್ಲಿ ಅಕ್ಟೋಬರ್ ಅಂತ್ಯಕ್ಕೆ ರೂ.48,000/- ಮಾತ್ರ ವೆಚ್ಚ ಭರಿಸಿ ಶೇಕಡ 6ರಷ್ಟು ಸಾಧನೆ ಮಾಡಲಾಗಿರುತ್ತದೆ. ಅದೇ ರೀತಿ ದಿನಾಂಕ 22.11.2014ರವರೆಗೆ ತಾಲ್ಲೂಕಿನಲ್ಲಿ 908 ಸ್ವಸಹಾಯ ಸಂಘಗಳಿದ್ದು, ಈ ಪೈಕಿ ನವೆಂಬರ್ 2014ರವರೆಗೆ 436 ಸ್ವಸಹಾಯ ಸಂಘಗಳ ಮ್ಯಾಪಿಂಗ್ ಮಾತ್ರ ಮಾಡಲಾಗಿದ್ದು, ಉಳಿದ ಸ್ವಸಹಾಯ ಸಂಘಗಳ ಮ್ಯಾಪಿಂಗ್ ಮಾಡಿರುವುದಿಲ್ಲ. ಶೇಕಡ 48ರಷ್ಟು ಮಾತ್ರ ಪ್ರಗತಿ ಸಾಧಿಸಿ ಪೂರ್ಣ ಗುರಿ ಸಾಧಿಸಲು ಸೂಕ್ತ ಮೇಲ್ವಿಚಾರಣೆ ಮಾಡಲು ವಿಫಲರಾಗಿರುತ್ತಾರೆ.
- ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 426 ಗ್ರಾಪಂಅ 2014 ದಿನಾಂಕ 30.06.2014ರ ವಿರುದ್ಧ ನಿಯಮಬಾಹಿರವಾಗಿ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಗ್ರೇಡ್-1 ಹಾಗೂ ಕಾರ್ಯದರ್ಶಿ ಗ್ರೇಡ್-2 ಸಿಬ್ಬಂದಿಗಳನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ/ಸರ್ಕಾರದ ಗಮನಕ್ಕೆ ಬಾರದೆ ನಿಯೋಜನೆ ಮಾಡಿ, ಈ ಮೇಲ್ಕಂಡ ಕ್ರಮಗಳಿಂದ ಸರ್ಕಾರದ ಕಾರ್ಯಕ್ರಮಗಳು ನಿಯಮಾನುಸಾರ ಜನ ಸಾಮಾನ್ಯರಿಗೆ ತಲುಪಲು ಪಾರದರ್ಶಕತೆ ಕೊರತೆ ಎದ್ದು ಕಾಣುತ್ತದೆ, ವೃತ್ತಿಪರ ಸೇವಾ ದಕ್ಷತೆಗೆ ಧಕ್ಕೆ ಬರುತ್ತದೆ ಹಾಗೂ ಅಧಿಕಾರ ವಿಕೇಂದ್ರೀಕರಣದ ಪ್ರಕ್ರಿಯೆಗೆ ತಡೆ ಉಂಟು ಮಾಡುವ ಹಾಗೂ ವಿವಿಧ ಕಾರ್ಯಕ್ರಮಗಳನ್ನು ತ್ವರಿತ ಅನುಷ್ಠಾನಗೊಳಿಸುವಲ್ಲಿ ವಿಳಂಬತೆಯನ್ನು ಉಂಟು ಮಾಡಿ ಕಾರ್ಯನಿರ್ವಾಹಕ ಅಧಿಕಾರಿಯ ಶಾಸನಬದ್ಧ ಕರ್ತವ್ಯಗಳನ್ನು ನಿರ್ವಹಿಸದೆ ವಿಫಲರಾಗಿರುತ್ತಾರೆ.

ಶ್ರೀ ಜಿ.ಧನರಾಜ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಚಿಕ್ಕಮಗಳೂರು ಇವರ ವಿರುದ್ಧದ 13 ಆರೋಪಗಳ ಪೈಕಿ 10 ಆರೋಪಗಳು ಸಾಬೀತಾಗಿದ್ದು, ಸದರಿ ಆರೋಪಗಳಲ್ಲಿ ಹಣಕಾಸಿನ ಅವ್ಯವಹಾರ/ಆರ್ಥಿಕ ನಷ್ಟದ ಆರೋಪಗಳು ಇರುವುದಿಲ್ಲ. ಕೆಲವೊಂದು ಕಾಮಗಾರಿಗಳಲ್ಲಿ ಪ್ರಗತಿಯನ್ನು ಸಾಧಿಸಲು, ಮೇಲ್ವಿಚಾರಣೆ ಜವಾಬ್ದಾರಿಯನ್ನು ನಿರ್ವಹಿಸಲು ವಿಫಲರಾಗಿರುವುದು, ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಯ ನಡವಳಿಗಳನ್ನು ಪಂಚತಂತ್ರದಲ್ಲಿ ಅಳವಡಿಸದೆ ಕರ್ತವ್ಯ ಲೋಪ ಮತ್ತು ನಿರ್ಲಕ್ಷತೆಗೆ ಸಂವಾದಿಯಾಗಿ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳು 1957ರ ನಿಯಮ-8(iii)ರನ್ವಯ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮರಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 302 ವಿಸೇಬಿ 2014 ದಿನಾಂಕ:03.08.2017**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಶ್ರೀ ಜಿ.ಧನರಾಜ್, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಕ್ಕಮಗಳೂರು (ಪ್ರಸ್ತುತ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ತೀರ್ಥಹಳ್ಳಿ) ಇವರು ಎಸಗಿದ ಕರ್ತವ್ಯಲೋಪ ಮತ್ತು ನಿರ್ಲಕ್ಷತೆಗೆ ಸಂವಾದಿಯಾಗಿ

ಸದರಿಯವರಿಗೆ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಾವಳಿಗಳು 1957ರ ನಿಯಮ 8(iii)ರನ್ವಯ ಒಂದು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮರಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಿ, ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

3/8/17

(ಡಿ.ಎಸ್.ವಿಜಯ್)
ಸರ್ಕಾರದ ಅಧೀನ ಕಾರ್ಯದರ್ಶಿ
(ಸೇವೆಗಳು-ಬಿ ಮತ್ತು ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಇವರಿಗೆ:-**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿಕ್ಕಮಗಳೂರು/ಶಿವಮೊಗ್ಗ.
2) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ತೀರ್ಥಹಳ್ಳಿ.
3) ಸಂಬಂಧಿಸಿದ ಅಧಿಕಾರಿಗೆ.

**ಪ್ರತಿ ಮಾಹಿತಿಗಾಗಿ:-**

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿ(ಆಡಳಿತ-2) ರವರ ಆಪ್ತ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
3) ಮೇಲ್ವಿಚಾರಕರು, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.